# ಸಾಮಾಜಿಕ ಪರಿವರ್ತನೆಯ ಹಾದಿಯಲ್ಲಿ ಶ್ರೀಮಾತೆ

**ಹೆಚ್.ಎನ್. ಸೋಮಸುಂದರಂ**

*ಶ್ರೀಮಾತೆಯವರು ಬದುಕಿಗೆ ಸ್ಪಂದಿಸಿದ ವಿಶಿಷ್ಟ ರೀತಿ ಹೇಗೆ ಒಂದು ಹೊಸ ಸಾಮಾಜಿಕ ಪರಿವರ್ತನೆಗೆ ನಾಂದಿಯಾಗಬಲ್ಲದು ಎಂಬುದನ್ನು ನಿರೂಪಿಸಿರುವ ಶ್ರೀಯುತ ಸೋಮಸುಂದರಂ ಅವರು ಸಮಾಜ ಸೇವಾಕರ್ತರ ಕಾರ್ಯಾಗಾರಗಳಲ್ಲಿ ಪ್ರಮುಖ ಸಂಪನ್ಮೂಲ ವ್ಯಕ್ತಿಯೂ ಹಾಗೂ ಸೇವಾಕರ್ತರಿಗೆ ಸ್ಫೂರ್ತಿಯೂ ಆಗಿದ್ದಾರೆ.*

ಮಾನವನ ಸಮಾಜ ಜೀವನವು ಒಂದು ನೈಸರ್ಗಿಕ ನಿಯಮ. ಬಹಳ ಹಿಂದೆ ಆದಿವಾಸಿ ಸಮುದಾಯಗಳಿಂದ ಪ್ರಾರಂಭವಾದ ಈ ಸಮಾಜಜೀವನವು ಅವನೊಬ್ಬ ಸಾಮಾಜಿಕ ವ್ಯಕ್ತಿಯಾಗುವಂತೆ ಮಾಡಿದೆ. ಸಂಘಜೀವನದಿಂದ ಸಮಾಜ ಜೀವನವು ರೂಪುಗೊಂಡು ಸಂಘವು ಒಂದು ಪ್ರಮುಖ ಆಯಾಮ ಪಡೆದಿದೆ. ಸೋಲಿಗ ಭಾಷೆಯಲ್ಲಿ 'ಸಂಗ'ವೆಂದು ಕರೆಯಲ್ಪಡುವ ಈ ಶಬ್ದಕ್ಕೆ 'ಸ್ನೇಹಿತ' ಎಂಬ ಅರ್ಥವಿದೆ. ಸಾಂಪ್ರದಾಯಿಕ ಸಾಹಿತ್ಯದಲ್ಲಿಯೂ ಹೆಚ್ಚು ಕಡಮೆ ಇದೇ ಭಾವವಿದ್ದು, ಸಂಸ್ಕೃತದಲ್ಲಿ 'ಸಂಘಶಕ್ತಿ'ಯನ್ನು ಪ್ರಶಂಸಿಸಲಾಗಿದೆ.

ಈ ಸಮುದಾಯಜೀವನದ ಫಲವಾಗಿಯೇ ಸಂಸ್ಕೃತಿ ನಾಗರೀಕತೆಗಳು ರೂಪುಗೊಂಡಿವೆ. ಸ್ಥೂಲಾರ್ಥದಲ್ಲಿ ಜೀವನಶೈಲಿ, ಬಾಹ್ಯಜೀವನವನ್ನು ಸುಖಮಯಗೊಳಿಸುವ ಸಾಧನ ಪರಿಕರಗಳನ್ನು ಹೊಂದಿ ಉಪಯೋಗಿಸುವುದು 'ನಾಗರಿಕತೆ' ಎನಿಸಿದರೆ, ಆಂತರಿಕ ಜೀವನದ ಸ್ಪಂದನ, ಮೌಲ್ಯಗಳ ನಿರೂಪಣೆ, ನೂರಾರು ವರ್ಷಗಳ ಜೀವನದ ಪರಿಪಾಕವು ಸಂಸ್ಕೃತಿಯಾಗಿ ಗೋಚರಿಸುವುದು. ಇವೆರಡೂ ಅನೇಕ ಬಾರಿ ಒಟ್ಟೊಟ್ಟಿಗೇ ವ್ಯವಹರಿಸಲ್ಪಟ್ಟು, ಎರಡರ ಮಧ್ಯೆ ನಿಖರ ಗೆರೆ ಎಳೆಯಲಾಗದು. ಇವುಗಳ ಉದ್ದೇಶವೆಂದರೆ ಮಾನವ ಜೀವನವನ್ನು ಸುಖಮಯವನ್ನಾಗಿ ಮಾಡಿಕೊಳ್ಳುವುದಾಗಿದೆ.

ಹೀಗೆ ಸಂಸ್ಕೃತಿ ನಾಗರಿಕತೆಗಳು ಮಾನವನ ಜೀವನದಲ್ಲಿ ಹಾಸುಹೊಕ್ಕಾಗಿವೆ. ಇವೆರಡರಿಂದಲೂ ಸಮಾಜಜೀವನ ರೂಪುಗೊಳ್ಳುತ್ತದೆ. ಸಂಸ್ಕೃತಿ ನಾಗರಿಕತೆಗಳಿಗೆ ಹೊಸ ಆಯಾಮ ಕೊಟ್ಟಿರುವುದೆಂದರೆ ವಿಜ್ಞಾನ. ನಾಗಾಲೋಟದಲ್ಲಿ ಮುಂದುವರೆಯುತ್ತಿರುವ ವಿಜ್ಞಾನ ಏನು ತಾನೆ ಮಾಡಿಲ್ಲ? ಆದರೆ ಅದರೊಡನೆ ದುಷ್ಪರಿಣಾಮಗಳೂ ಬಂದಿವೆ. ಈ ಸಾಲುಗಳನ್ನು ಗಮನಿಸಿ:

**ಕಾಲವ ದೇಶವನಳೆವರು**
**ಆಕಾಶವ ತೂಗುವರು**



*ಜಯರಾಂಬಾಟಿಯಲ್ಲಿರುವ ಶ್ರೀಮಾತೆಯವರ ಗುಡಿಸಲು ಮನೆ*

**ಅತಿ ದೂರದ ನಕ್ಷತ್ರಕೆ**
**ಕ್ಷಣ ಮಾತ್ರದಿ ಸಾಗುವರು.**
**ನೊಣ ಮೀಸೆಯ ಹುಳು ಹೆಜ್ಜೆಯ**
**ಎಣಿಸುವ ಬಿಜ್ಞೆಯ ಬಲ್ಲ;**
**ತನ್ನಾತ್ಮವ ತಾನರಿಯುವ**
**ಸಾಧನೆಯೊಂದನು ಒಲ್ಲ!**

("ಶತಮಾನದ ಸಂಧ್ಯೆ"—ಕುವೆಂಪು)

ಇದೊಂದು ವಿಪರ್ಯಾಸ—"ತಿಳಿದೂ ತಿಳಿದೂ ತಿಳಿದೂ ಕಡೆಗೇನೂ ಗೊತ್ತಿಲ್ಲ"ದಿರುವುದು. ಇದರ ಪರಿಣಾಮವೆಂದರೆ ಆತ್ಮನಾಶ. ಇಂದು ಜಗತ್ತು ಈ ದಿಕ್ಕಿನಲ್ಲಿ ಓಡುತ್ತಿದೆ. ಅಂದು ಕಲ್ಲುದೊಣ್ಣೆಗಳಿಂದ ಹೊಡೆದಾಡಿದ ಮನುಷ್ಯ ಇಂದು ಮದ್ದುಗುಂಡುಗಳಿಂದ ಹೋರಾಡುತ್ತಿದ್ದಾನೆ. ಪರಿಣಾಮ ವಿನಾಶದ ವ್ಯಾಪ್ತಿ ಸಹಸ್ರ ಪಾಲು ಹೆಚ್ಚಾಗಿರುವುದು. ಅತ್ಯಂತ ಮುಂದುವರಿದ ಸಂಪರ್ಕ ಸಾಧನಗಳು ಅತ್ಯಂತ ಬೇಗ ದ್ವೇಷಾನಲವನ್ನು ಹರಡುವುದು. ಇದರ ಫಲಶ್ರುತಿಯಾಗಿ ಕೊಲ್ಲಲೆಂದೇ ಸಾಕಷ್ಟು 'ಮುಂದುವರಿದ' ಶಸ್ತ್ರಾಸ್ತ್ರಗಳು ವಿಶ್ವದಲ್ಲಿ ಸಜ್ಜಾಗಿರುವುದು.

"ಪಾಶ್ಚಾತ್ಯ ದೇಶಗಳು ಆಧ್ಯಾತ್ಮಿಕತೆಯನ್ನು ಸ್ವೀಕರಿಸದಿದ್ದರೆ ಇನ್ನು ಐವತ್ತು ವರ್ಷಗಳಲ್ಲಿ ನುಚ್ಚುನೂರಾಗುವುದು" ಎಂದು ಸ್ವಾಮಿ ವಿವೇಕಾನಂದರು ಹತ್ತೊಂಬತ್ತನೆ ಶತಮಾನದ ಅಂತ್ಯದಲ್ಲಿಯೇ ಭವಿಷ್ಯ ನುಡಿದಿದ್ದರು. ಐವತ್ತು ವರ್ಷಗಳಿರಲಿ, ನಲವತ್ತು ವರ್ಷಗಳನ್ನೂ ತಡೆಯಲಿಲ್ಲ ಯುದ್ಧಸಾಮ್ರಾಟರ ಕದನ ಕುತೂಹಲ ಸನ್ನಾಹ. ಅಂದಿನ ಪರಿಸ್ಥಿತಿಯನ್ನು ವಿವರಿಸುವ ಕವಿವಾಣಿಯನ್ನು ಕೇಳಿ:

ತೇಲೇನದೂ ಪಶ್ಚಿಮದೆಡೆ
ರಂಜಿಪ ರಕ್ತ ಜ್ವಾಲೆ
ಉನ್ಮಾದದ ರಣಮೋದದ
ಮದ್ದಿನ ಗುಂಡಿನ ಲೀಲೆ

("ಶತಮಾನದ ಸಂಧ್ಯೆ"—ಕುವೆಂಪು)

ಮತ್ತೆ ಇನ್ನೂ ಐವತ್ತು ವರ್ಷ ಕಳೆದು ಈಗ ಹೊಸ ಶತಮಾನ. ಅದರೊಡನೆ ಸಹಸ್ರಮಾನವೂ ಬಂದಿದೆ. ಈಗ ಪರಿಸ್ಥಿತಿಯು ಇನ್ನೂ ಹೆಚ್ಚು ಚಿಂತಾಜನಕವಾಗಿದೆ. 'ಪಶ್ಚಿಮದೆಡೆ' ಎಂದಿರುವುದನ್ನು ಈಗ 'ವಿಶ್ವದೆಲ್ಲೆಡೆ' ಎಂದು ಬದಲಾಯಿಸಿಕೊಂಡು ಓದಿಕೊಳ್ಳಬೇಕು, ಅಷ್ಟೇ!

ಹೀಗೆ ವಿಶ್ವಸಮರ ಸಾಧ್ಯತೆಯು ತೂಗುಕತ್ತಿಯಾಗಿ ನಮ್ಮ ಮೇಲೆ ಓಲಾಡುತ್ತಿದೆ. ಆದರೆ ಬರಿಯ ಯುದ್ಧ ಭೀತಿಯೊಂದೇ ಸಮಸ್ಯೆಯಾಗಿದ್ದಿದ್ದರೆ ಅದನ್ನು ರಾಜಕೀಯ ದಕ್ಷತೆಯಿಂದ ಪರಿಹರಿಸಿಕೊಳ್ಳುವ ಸಾಧ್ಯತೆಯಿತ್ತು. ಇನ್ನೂ ಹೆಚ್ಚಿನ ಪರಿಶ್ರಮ ಚರ್ಚೆಗಳಿಂದ ಮುಂದಾಳುತ್ವ ಮಟ್ಟದಲ್ಲಿ ಪರಿಹಾರಗಳನ್ನು ಹುಡುಕಬಹುದಿತ್ತು. ಒಂದು ಹೇಳಿಕೆ ಪ್ರಕಾರ "ಯುದ್ಧಗಳು ಪ್ರಾರಂಭವಾಗುವುದು ರಣರಂಗದಲ್ಲಿ ಅಲ್ಲ; ಮುಖಂಡರೆನಿಸಿಕೊಂಡವರ ಮನದಾಳದಲ್ಲಿ. ಆದ್ದರಿಂದ ಯುದ್ಧ ತಪ್ಪಿಸಬೇಕಾದರೆ ಅಲ್ಲಿ ನಮ್ಮ ಬೇಲಿಗಳನ್ನು ಹಾಕಬೇಕು." ಈ ನಿಟ್ಟಿನಲ್ಲಿ ವಿಶ್ವಜನತೆ ಕಾರ್ಯಪ್ರವೃತ್ತವಾಗಬಹುದಿತ್ತು. ಆದರೆ ಈಗ ಎದುರಾಗಿರುವ ಸಮಸ್ಯೆಯೇ ಬೇರೆ; ಇನ್ನೂ ಸೂಕ್ಷ್ಮ, ಭೀಕರ. ಅದೇ ನಶಿಸಿಹೋಗುತ್ತಿರುವ ಸಂವೇದನಾಶೀಲತೆ, ಮಾನವ ಮಾನವ ಸಂಬಂಧಗಳ ವಿನಾಶ. ಇದಕ್ಕೆ ಪ್ರೋದ್ಬಲವಾಗಿ ಸ್ವಾರ್ಥದ ಅಟ್ಟಹಾಸ. ಇದು ವ್ಯಕ್ತಿ, ಕುಟುಂಬ ಸಮುದಾಯ, ರಾಜ್ಯ, ದೇಶ—ಎಲ್ಲ ಮಟ್ಟಗಳಲ್ಲಿಯೂ ಆವರಿಸಿದೆ. ದೆವ್ವವನ್ನು ಬಿಡಿಸಲು ಸಾಸಿವೆ ಕಾಳು ಉಪಯೋಗಿಸುತ್ತಾರಂತೆ, ಆ ಸಾಸಿವೆ ಕಾಳಿನಲ್ಲಿಯೇ ಭೂತ ಸೇರಿಕೊಂಡರೆ ಹೇಗೆ ಎಂದು ಶ್ರೀರಾಮಕೃಷ್ಣರು ಕೇಳುವಂತೆ ಈಗ ಈ ಹೃದಯರಾಹಿತ್ಯವು ಆಳವಾಗಿ ನಮ್ಮೊಡನೆ ಸಮಾಜದಲ್ಲಿ ಸೇರಿಕೊಂಡುಬಿಟ್ಟಿದೆ. ಎಲ್ಲ ಸಮಸ್ಯೆಗಳ ಮೂಲವು ಅದೇ; ಕೊನೆಯೂ ಅದೇ. ಇದರಿಂದ ವಿಶ್ವಜನತೆ ಬಿಡಿಸಿಕೊಂಡು ಮೇಲೆದ್ದು ಬರಬೇಕಾಗಿದೆ.

ಮಹಾತ್ಮಾಗಾಂಧೀಜಿಯವರು ತೀರಿಕೊಂಡ ನಂತರ ಅವರ ವಸ್ತುಗಳ ಪಟ್ಟಿಯೊಂದನ್ನು ಮಾಡಿದರಂತೆ. ಅಲ್ಲಿ ದೊರೆತದ್ದು ಕೇವಲ ಹದಿನಾಲ್ಕು ವಸ್ತುಗಳು: ಎರಡು ಮುಂಡು ಪಂಚೆ, ಒಂದು ಲಾಂದ್ರ, ಒಂದು ಗಡಿಯಾರ, ಒಂದು ಕೋಲು ಇತ್ಯಾದಿ. ಆ ಮಹಾತ್ಮರಿಗೆ ಅಷ್ಟೇ ಸಾಕಾಯಿತು. ಈಗ ಜಗತ್ತಿನ ವಸ್ತುವ್ಯಾಮೋಹವೋ! ಅದೆಷ್ಟಾದರೂ ನಮಗೆ ಸಾಲದು. ಭಿಕ್ಷುಕನಾರು ಎಂಬ ಪ್ರಶ್ನೆಗೆ ಆಸೆಗಳಿಂದ ತುಂಬಿದವನು ಎಂಬ ಒಂದು ಉತ್ತರವಿದೆ. ಆ ದೃಷ್ಟಿಯಲ್ಲಿ ಜಗತ್ತು ಭಿಕ್ಷುಕರಿಂದ ತುಂಬಿರುವಂತೆ ಕಾಣುತ್ತದೆ.

ಇವಿಷ್ಟೇ ಅಲ್ಲ. ಇಂದಿನ ಸಮಾಜಕ್ಕೆ ಇನ್ನೂ ಅನೇಕ ರೋಗ ರುಜಿನಗಳಿವೆ. ಧರ್ಮಾಂಧತೆ, ಪರಸ್ಪರ ಅಪನಂಬಿಕೆ, ಶೋಷಣೆ, ಲಿಂಗಭೇದ ಮುಂತಾದುವು. ಇವೆಲ್ಲದರ ಮೂಲ ಅಜ್ಞಾನವಾದರೂ ಹೃದಯಹೀನತೆಯೇ ಮುಖ್ಯ ಅಪರಾಧಿ ಎಂದು ಹೇಳಬೇಕಾಗುತ್ತದೆ. ಇದನ್ನೆಲ್ಲ ತೊಡೆದುಹಾಕಬೇಕಾದ ಪ್ರಕ್ರಿಯೆ ಸಾಮಾಜಿಕ ಪರಿವರ್ತನೆಗೆ ನಾಂದಿಯಾಗುತ್ತದೆ.

ಎಲ್ಲ ರೀತಿಯಿಂದಲೂ ಪರಿಪೂರ್ಣವಾದ ಸಮಾಜ ಎಂಬುದೊಂದು ಇರುವುದೆಂದು ಹೇಳಲಾಗದು. ರಾಮರಾಜ್ಯದಲ್ಲಿಯೂ ಅಂದಿನ ಕಾನೂನು ಕಟ್ಟಳೆಗಳಲ್ಲಿ ಸಿಲುಕಿ ಪರಿತ್ಯಾಗದಿಂದ ನೊಂದ ಸೀತೆಗೆ ಅಂದಿನ ಸಮಾಜ ಉತ್ತರ ಕೊಡಬೇಕಾಗುತ್ತದೆ. ಆದ್ದರಿಂದ ಸಾಮಾಜಿಕ ಪರಿವರ್ತನೆ ಒಂದು ನಿರಂತರ ಕ್ರಿಯೆ. ಅಂದಂದಿನ ಸಾಮಾಜಿಕ ಧಾರ್ಮಿಕ ಚೌಕಟ್ಟುಗಳಲ್ಲಿ ಪರಿಸ್ಥಿತಿಯನ್ನು ಸಾಧ್ಯವಾದಷ್ಟು ಉತ್ತಮಗೊಳಿಸಿ ಹೊಸ ಸಮಾಜವನ್ನು ಸೃಷ್ಟಿಸುವುದು, ಪರಿವರ್ತನಗೊಳಿಸುವುದು ಇದರಲ್ಲಿ ಅಡಗಿರುವ ಕ್ರಿಯೆ. ಈ ರೀತಿ ಮಾನವ ಒಳಿತಿಗಾಗಿ ಸಮಾಜ ಪರಿವರ್ತನೆ ಆಗಬೇಕಾದರೆ ಆ ಜನಸಮುದಾಯವು ಆಶಿಸಿರುವ ಮೂಲತತ್ತ್ವ, ವಿಚಾರಧಾರೆ, ದರ್ಶನವು ಸತ್ಯವೂ, ಹಿತವೂ ಭದ್ರವಾದುದೂ ಆಗಿರಬೇಕು. ಆ ವೇದಾಂತವು ಅನುಷ್ಠಾನಯೋಗ್ಯವಾಗಿದ್ದು, ಅದನ್ನು ಅನುಸರಿಸುವ ಕೆಲವು ಜನರಲ್ಲಿಯಾದರೂ ಅದು ಬೆಳಗಬೇಕು.

ವಿಶ್ವದಲ್ಲಿ ಸುಂದರ ಸಂಸ್ಕೃತಿಯ ಪ್ರವರ್ತಕಳಾಗಿ ಮಹಿಳೆಯು ಜನರ ಜೀವನವನ್ನು ಸಾಂಸ್ಕೃತಿಕ ನೆಲೆಗಟ್ಟಿನಲ್ಲಿ ನಿಲ್ಲಿಸಿರುವಂತೆ ಕಾಣುತ್ತದೆ. ಎಲ್ಲರನ್ನೂ ಹೊತ್ತು ಸಲಹುವ ಭೂಮಿಯನ್ನೂ ಇತ್ತು ಸಲಹುವ ಪ್ರಕೃತಿಯನ್ನೂ ಜಲಧಾರೆ ನೀಡುವ ನದಿಯನ್ನೂ ಸ್ತ್ರೀಯಾಗಿ ಪರಿಗಣಿಸಿ ಆದರಿಸಿ ಆರಾಧಿಸುವುದರ ಹಿನ್ನೆಲೆ ಇಲ್ಲಿದೆ. ಅದರಲ್ಲಿಯೂ ಭಾರತ ಮಹಿಳೆ ಆದರ್ಶ ತಾಯಿಯಾಗಿ ತನ್ನ ಪರಿಪೂರ್ಣತೆಯನ್ನು ಕಂಡುಕೊಂಡಿದ್ದಾಳೆ. ಆದ್ದರಿಂದ ಸಾಮಾಜಿಕ ಪರಿವರ್ತನೆ ಆಗಲು ಮಹಿಳೆ ಮನಸ್ಸು ಮಾಡಿದರೆ, ಅದರಲ್ಲಿ ತಾಯಿ ಎನಿಸಿದವಳು ಬಯಸಿದರೆ ಅದು ಅತ್ಯಂತ ಪ್ರಭಾವ ಬೀರುವುದರಲ್ಲಿ ಸಂದೇಹವಿಲ್ಲ. ಮೇಲೆ ತಿಳಿಸಿದಂತೆ ಕೆಲವು ಜನರಲ್ಲಿ ದಿವ್ಯ ಜೀವನಗಳು ಬೆಳಗುವುದಾದರೆ, ಆ ಕೆಲವು ಜನ ತಾಯಿಯರಾದರೆ ಇನ್ನೂ ಹೆಚ್ಚು ಪರಿಣಾಮಕಾರಿಯಾಗಬಹುದು. ಇಂತಹ ಒಂದು ಜ್ವಲಂತ ನಿದರ್ಶನವನ್ನು ನಾವು ಶ್ರೀಮಾತೆ ಶಾರದಾದೇವಿಯವರ ಜೀವನದಲ್ಲಿ ಕಾಣುತ್ತೇವೆ.

ಸ್ವಾಮಿ ವಿವೇಕಾನಂದರು ವಿಶ್ವಧರ್ಮ ಸಮ್ಮೇಳನವನ್ನು ಮುಗ್ಧಗೊಳಿಸಿದ "ಸೋದರಿಯರೇ ಮತ್ತು ಸೋದರರೇ," ಎಂಬ ಸಂಬೋಧನೆಯನ್ನು ಶ್ರೀಮಾತೆಯವರು ತಮ್ಮ ಶಿಷ್ಯವೃಂದದಲ್ಲಿ ಸಾಕಾರಗೊಳಿಸಿದ್ದರು. ಅವರು ಒಬ್ಬರನ್ನೊಬ್ಬರು ಅಕ್ಕ, ಅಣ್ಣ, ತಮ್ಮ, ತಂಗಿ ಮುಂತಾಗಿ ವಯಸ್ಸಿಗನುಗುಣವಾಗಿ ಕರೆಯುತ್ತಾ ಅತ್ಯಂತ ಪ್ರೇಮ ಗೌರವಗಳೊಡನೆ ನಡೆದುಕೊಳ್ಳುತ್ತಿದ್ದರು.

ಅಂದಿನ ಶಿಷ್ಯರಲ್ಲಿ ಒಬ್ಬರಾಗಿದ್ದ ಸ್ವಾಮಿ ಶಾರದೇಶಾನಂದರು ಇದನ್ನು ಮನೋಜ್ಞವಾಗಿ ಚಿತ್ರಿಸಿದ್ದಾರೆ. ಅವರು ಮುಂದುವರಿಯುತ್ತಾ "ಇಂದಿನ (ಎಂದರೆ ಅಂದಿನ) ಸಮಾಜದಲ್ಲಿ ಹೊಸ ವ್ಯವಸ್ಥೆಗಳ ನಡುವೆ ಸ್ತ್ರೀಪುರುಷರು ಒಟ್ಟಾಗಿ ಕೆಲಸ ಮಾಡಲೇಬೇಕು. ಇದರ ಬಗ್ಗೆ ತಾಯಿಯವರು ಕಂಡುಕೊಂಡ ಪರಸ್ಪರ ಗೌರವಯುತ ಸೌಹಾರ್ದ ನಿಕಟ ಸಂಬಂಧ ನಿಜಕ್ಕೂ ಅತ್ಯವಶ್ಯಕ ಮತ್ತು ಸಂದರ್ಭೋಚಿತ" ಎಂದು ವಿವರಿಸುತ್ತಾರೆ. ಸಾಮಾಜಿಕ ಪರಿವರ್ತನೆಯಲ್ಲಿ ಒಬ್ಬ ಮಹಾಮಾತೆ ನಿರ್ವಹಿಸಿರುವ ಪಾತ್ರವಿದು. (*The Mother as I saw Her*, ಪು. ೮೫ ನೋಡಿ.)

ಶ್ರೀಮಾತೆಯವರು ಯಾವಾಗಲೂ ಹಂಚಿಕೊಂಡು ತಿನ್ನುವುದನ್ನು ಇಷ್ಟಪಡುತ್ತಿದ್ದರು. ಇದು ಈಗ ಆದಿವಾಸಿ ಸಮುದಾಯಗಳಲ್ಲಿ ಮಾತ್ರ ಇನ್ನೂ ಉಳಿದುಕೊಂಡಿದೆ. ಒಮ್ಮೆ ಶ್ರೀಮಾತೆಯವರು ಆರೋಗ್ಯ ಕಾರಣಗಳಿಗಾಗಿ ತಮಗೆ ಬೇರೆ ಆಹಾರವನ್ನು ಬಡಿಸಿದರೂ ಎಲ್ಲರಿಗೂ ಕೊಡಮಾಡಿದ ಹಿಂದಿನ ದಿನದ ಆಹಾರವನ್ನೇ ಕೇಳಿ ಪಡೆದುಕೊಂಡರು. ಸರಳವಾಗಿ ಕಾಣುವ ಈ ಘಟನೆ ಶ್ರೀಮಾತೆಯವರು ಯಾವುದನ್ನೂ ಕಡೆಗಣಿಸದೆ ಹೇಗೆ ಜನರೊಡನೆ ಒಂದಾಗಿದ್ದರು ಎಂಬುದನ್ನು ನಿರೂಪಿಸುತ್ತದೆ.

ಶ್ರೀಮಾತೆಯವರ ಸಾಮಾಜಿಕ ಪ್ರಜ್ಞೆ, ಕಳಕಳಿ ತೀವ್ರವಾಗಿತ್ತು. ಅವರ ಶಿಷ್ಯರೊಬ್ಬರು ತಮ್ಮ ದಿನಚರಿಯಲ್ಲಿ ಒಂದು ಘಟನೆಯನ್ನು ಹೀಗೆ ಉಲ್ಲೇಖಿಸುತ್ತಾರೆ :

ಸುರೇಂದ್ರ ರತನ್‌ಗಂಜ್‌ನ ಸ್ಕೂಲಿನಲ್ಲಿ ಮುಖ್ಯೋಪಾಧ್ಯಾಯನಾಗಿದ್ದ. ರತನ್‌ಗಂಜಿನ ಅನೇಕ ಕಟುಕರು ಹಸುಗಳನ್ನು ಜೀವಸಹಿತ ಚರ್ಮಸುಲಿಯುತ್ತಿದ್ದರು. ಒಂದು ದಿನ ಅವರು ಪಾಠಶಾಲೆಯ ಮುಂದೆಯೇ ಹಾಗೆ ಮಾಡಿದರು. ಸುರೇಂದ್ರ ಮತ್ತು ಇತರ ಉಪಾಧ್ಯಾಯರು, ಹುಡುಗರು, ಹಿಂದೂಗಳು, ಮುಸಲ್ಮಾನರು ಎಲ್ಲರೂ ಕಲೆತು ಅದನ್ನು ಪ್ರತಿಭಟಿಸಿದರು. ಆ ಕಟುಕರನ್ನು ಹೊಡೆದೋಡಿಸಲಾಯಿತು. ಇದರಿಂದ ಸ್ವಲ್ಪ ತೊಂದರೆಯಾಯಿತು. ಸುರೇಂದ್ರನಿಗೆ ಕಟುಕರಿಂದ ಅಪಾಯವಾಗಬಹುದೆಂದು ತೋರಿತು. ಆ ಸಮಯದಲ್ಲಿ ಪಾಠಶಾಲೆಯ ಅನೇಕ ಯುವಕರು ಜಯರಾಂಬಾಟಿಗೆ ದೀಕ್ಷೆ ಪಡೆಯಲು ಹೋದರು. ಅವರು ಶ್ರೀಮಾತೆಯವರಿಗೆ ಇದನ್ನೆಲ್ಲಾ ಹೇಳಿದರು. ಅವರು ತುಂಬಾ ಕಳವಳಗೊಂಡು, "ನೀವೇ ಇಂತಹ ಕೃತ್ಯವನ್ನು ನಿಷೇಧಿಸದಿದ್ದಲ್ಲಿ ಮತ್ತಾರು ಧಿಕ್ಕರಿಸುವರು?" ಎಂದರು. ಅವರ ಹೇಳಿಕೆಯಂತೆ ಸುರೇಂದ್ರನಿಗೆ ಅಭಯ ಮತ್ತು ಪ್ರೋತ್ಸಾಹ ನೀಡುವ ಪತ್ರ ಬರೆಯಲಾಯಿತು. ಅವನು ಮತ್ತೊಮ್ಮೆ ಆ ಕೃತ್ಯ ನಡೆಯದಂತೆ ನೋಡಿಕೊಳ್ಳಬೇಕೆಂದು ಹೇಳಲಾಯಿತು. ಮುಂದೆ ಶ್ರೀಮಾತೆ ಸುರೇಂದ್ರನಿಗೆ ಪತ್ರದಲ್ಲಿ "ನಿಜವಾಗಿಯೂ ದೇವರಿರುವುದು ನಿಜವಾದರೆ ಇಂತಹ ಕೃತ್ಯಗಳನ್ನು ಅವನು ನಿಲ್ಲಿಸುವನು" ಎಂದು ಬರೆದರು. ಸ್ವಲ್ಪಕಾಲದ ತರುವಾಯ ಈ ವಿಷಯವಾಗಿ ಕೋರ್ಟಿಗೆ ಒಂದು ಅರ್ಜಿ ಬರೆದು ಅದರಿಂದ ಈ ಹೀನ ಹತ್ಯಾಕಾರ್ಯವನ್ನು ಸಂಪೂರ್ಣವಾಗಿ ನಿಲ್ಲಿಸಿದರು. (ಶ್ರೀಶಾರದಾದೇವಿ ಸಂಭಾಷಣೆ, ಪು. ೧೪೯)

ಕರ್ತವ್ಯಪ್ರಜ್ಞೆ ಮತ್ತು ಸಮಯ ಪರಿಪಾಲನೆ ಶ್ರೀಮಾತೆಯವರ ಜೀವನದ ಒಂದು ಭಾಗವೇ ಆಗಿತ್ತು. ಅದನ್ನು ಅದೆಷ್ಟು ಹಾಸ್ಯಮಯವಾಗಿ ಆದರೆ ಅಷ್ಟೇ ಪರಿಣಾಮಕಾರಿಯಾಗಿ ವಿವರಿಸುತ್ತಾರೆ ಶ್ರೀಮಾತೆ! "ನೀನು ಯಾವುದಾದರೂ ಕೆಲಸದ ಮೇಲೆ ಹೋದರೆ, ಆ ಕೆಲಸ ಮುಗಿದ ತಕ್ಷಣ ವಾಪಸ್ಸು ಬರುವುದಕ್ಕೆ ಕಲಿತುಕೋ. ಎಷ್ಟೋ ಸಲ ಜನ ಮಣ್ಣುಹುಳ ಹಿಡಿಯುವುದಕ್ಕೆ ಎಷ್ಟು ಅಗೆಯುತ್ತಾರೆಂದರೆ ಹಾವುಗಳು ಹೊರಕ್ಕೆ ಬರುತ್ತವೆ." (ವಾತ್ಸಲ್ಯ ತೀರ್ಥ, ಪು. ೨೪)

ಹೃದಯಸಂವೇದನೆ ಮಾನವೀಯ ಗುಣ. ಅದನ್ನು ಶ್ರೀಮಾತೆಯವರು ತಮ್ಮ ಜೀವನದ ಉಸಿರಾಗಿ ಮಾಡಿಕೊಂಡರು. ಅವರು ಅದನ್ನು ವಿಶ್ಲೇಷಿಸಿ ಸರಳವಾಗಿ ನಿರೂಪಿಸಿದ್ದಾರೆ : "ಮನುಷ್ಯ ಎಚ್ಚರದಿಂದ ಬದುಕಬೇಕು. ಪ್ರತಿಯೊಂದು ಕೆಲಸವೂ ತನ್ನ ಪರಿಣಾಮವನ್ನು ಉಂಟುಮಾಡುತ್ತದೆ. ಬೇರೆಯವರಿಗೆ ಕಟುವಾದ ಮಾತುಗಳನ್ನು ಆಡುವುದಾಗಲೀ, ಇನ್ನೊಬ್ಬರ ನೋವಿಗೆ ಕಾರಣವಾಗುವುದಾಗಲೀ ಒಳ್ಳೆಯದಲ್ಲ... ಇತರರಿಗೆ ಸಂತೋಷವನ್ನು ಕೊಡಲು ಸಾಧ್ಯವಾದಾಗ ಮಾತ್ರ ಮನುಷ್ಯನ ಜೀವನ ಸಾರ್ಥಕವಾಗುತ್ತದೆ."

ನಿರ್ವ್ಯಾಜ ಪ್ರೇಮ ಶ್ರೀಮಾತೆಯವರದು. ಜಯರಾಂಬಾಟಿಯಲ್ಲಿ ಕೂಲಿಕೆಲಸ ಮಾಡಿ ಜೀವಿಸುತ್ತಿದ್ದ ಬಾಲ ವಿಧವೆಯೊಬ್ಬಳಿದ್ದಳು. ಶ್ರೀಮಾತೆಯವರಿಗೆ ಅವಳ ಬಗ್ಗೆ ಅಪಾರ ಪ್ರೇಮ. ವಯಸ್ಸಿಗೆ ಬಂದಾಗ ಆಕೆ ಯುವಕನೊಬ್ಬನ ಸೆಳೆತಕ್ಕೆ ಒಳಗಾದಳು. ಅದುವರೆವಿಗೂ ಅವಳ ಕಷ್ಟಗಳ ಬಗ್ಗೆ ಕಣ್ಣೆತ್ತಿ ಕೂಡ ನೋಡದಿದ್ದ ಹಳ್ಳಿಯ ಧುರೀಣರು ಅವಳಿಗೆ ಶಿಕ್ಷೆ ಕೊಡಲು ಮುಂದಾದರು. ಹಳ್ಳಿಯೆಲ್ಲಾ ಕಂಪಿಸಿತು. ಶ್ರೀಮಾತೆ ಮೌನವಾಗಿ ಆಕೆಗಾಗಿ ದೇವರಲ್ಲಿ ಪ್ರಾರ್ಥಿಸಿದರು. ದೇವರು ಅವರ ಮೊರೆಯನ್ನು ಕೇಳಿರಬೇಕು. ಶ್ರೀಮಾತೆಯವರ ಶಿಷ್ಯನಾಗಿದ್ದ ಸಹೃದಯಿ ಜಮೀನ್ದಾರನೊಬ್ಬನು ತನ್ನ ಪ್ರಭಾವದಿಂದ ಆ ಬಾಲ ವಿಧವೆಯನ್ನು ಕಷ್ಟದಿಂದ ಪಾರು ಮಾಡಿದನು. ಇದಾದ ಕೆಲವು ದಿನಗಳ ನಂತರ ಆ ಜಮೀನ್ದಾರನು ಶ್ರೀಮಾತೆಯವರಿಗೆ ಪ್ರಣಾಮ ಮಾಡಲು ಬಂದಾಗ ಶ್ರೀಮಾತೆ "ಮಗು, ನೀನು ಆ ಬಡಬಾಲೆಯನ್ನು ರಕ್ಷಿಸಿ ಒಳ್ಳೆಯ ಕೆಲಸ ಮಾಡಿದೆ. ದೇವರು ನಿನಗೆ ಒಳ್ಳೆಯದನ್ನು ಮಾಡಲಿ" ಎಂದು ಹರಸಿದರು. ಸ್ವಾಮಿ ಶಾರದೇಶಾನಂದರು ಈ ಪ್ರಸಂಗವನ್ನು ವಿವರಿಸಿ ಹೀಗೆ ಬರೆಯುತ್ತಾರೆ:

"ಬಾಲ ವಿಧವೆಯರನ್ನೂ ಗಂಡನಿಂದ ಪರಿತ್ಯಕ್ತೆಯರಾದ ಸ್ತ್ರೀಯರನ್ನೂ ಕಂಡರೆ ಶ್ರೀಮಾತೆಯವರ ಹೃದಯ ಬೇಯುತ್ತಿತ್ತು. ವಿಧವಾ ಜೀವನವು ಸಂನ್ಯಾಸಕ್ಕೆ ಪ್ರವೇಶಿಸಿದಂತೆಯೇ! ಆದರೆ ಅದನ್ನು ಕಡುಕಷ್ಟವೆಂದು ಭಾವಿಸದೆ ಸಂದರ್ಭವೆಂದು ಅರಿತು

**ಶ್ರೀಶಾರದಾದೇವಿಯವರು ಶ್ರೀರಾಮಕೃಷ್ಣರ ಅನುಯಾಯಿಗಳೆಲ್ಲರಿಗೂ ಮಾರ್ಗದರ್ಶಕರಾಗಿದ್ದರು. ಅವರೆಡೆಗೆ ಹೋದ ಯಾವುದೇ ವ್ಯಕ್ತಿಯಾಗಲಿ ಅವರ ಬೋಧನೆಯಿಂದಲೂ ಸಾಂನಿಧ್ಯದಿಂದಲೂ ಉತ್ತೇಜಿತನಾಗದಿರುವುದು ಸಾಧ್ಯವಿರಲಿಲ್ಲ. ಅವರನ್ನು ಸಂಧಿಸಿದವರೆಲ್ಲರೂ ಅವರು ಪಾವಿತ್ರ್ಯ, ವಿವೇಕ, ಮೃದುತ್ವ ಮತ್ತು ಮಾಧುರ್ಯಗಳ ಮೂರ್ತರೂಪ ಎಂದು ಭಾವಿಸಿಯೇ ಹಿಂದಿರುಗುತ್ತಿದ್ದರು. ಅವರ ಬಾಯಿಂದ ಒಂದೇ ಒಂದು ಕಟು ಮಾತು ಹೊರಬೀಳಲಿಲ್ಲ. ಅವರು ಎಷ್ಟೇ ದೃಢಮನಸ್ಕರಾದರೂ ನಿಷ್ಠುರರಾಗಿರಲಿಲ್ಲ.**

*— ಡಾ. ಎಸ್. ರಾಧಾಕೃಷ್ಣನ್*

ಸ್ವೀಕರಿಸುವ ಮನೋಭಾವವಿರಬೇಕು. ಓ ಮಾತೆ! ನಿನ್ನ ಅನಾಥ ಮಕ್ಕಳಿಗೆ ದಾರಿ ತೋರಿಸಲೆಂದೇ ನೀನು ಪವಿತ್ರತೆಯ ಸಾಕಾರ ಮೂರ್ತಿಯಾಗಿ ಬಂದೆಯಾ? ನೀನು ದಾರಿ ತೋರದಿದ್ದರೆ ಇನ್ನಾರು ಈ ಆದರ್ಶವನ್ನು ಬೋಧಿಸುತ್ತಿದ್ದರು, ಸ್ವಪ್ರತಿಷ್ಠೆಯಲ್ಲ, ಆದರೆ ಸ್ವ-ನಿರಾಕರಣೆ ಮತ್ತು ಮನೋನಿಗ್ರಹಗಳೇ ಶಾಂತಿ ಸುಖಗಳಿಗೆ ಮಾರ್ಗವೆಂದು? ಬೇಲೂರು ಮಠ ಸ್ಥಾಪನೆಗಾಗಿ ನೀನು ಶ್ರೀರಾಮಕೃಷ್ಣರನ್ನು ಪ್ರಾರ್ಥಿಸಿದೆ. ನಿವೇದಿತಾ ಶಾಲೆ ಮತ್ತು ಜಗದಾಂಬ ಆಶ್ರಮಗಳನ್ನು ನಿನ್ನ ಕೈಗಳಿಂದಲೇ ಸ್ಥಾಪಿಸಿದೆ! ಕೃಪೆದೋರು, ಓ ತಾಯಿ, ನೀನು ಬೋಧಿಸಿರುವುದನ್ನು ನಾವು ಮರೆಯದಿರಲೆಂದು!" (*The Mother as I Saw Her*, ಪು. ೮೦)

ಸಾಮಾಜಿಕ ಪರಿವರ್ತನೆಯಲ್ಲಿ ಶ್ರೀಮಾತೆಯವರ ಕೊಡುಗೆಯನ್ನು ಎರಡು ಸ್ತರಗಳಲ್ಲಿ ಗುರುತಿಸಬಹುದು. ಮೊದಲನೆಯದು ಭೌತಿಕವಾಗಿ ಮಹಿಳೆಯರ ವಿದ್ಯಾಭ್ಯಾಸ, ಯುವ ಜನಾಂಗದ ಶೀಲ, ನೈತಿಕ ಉನ್ನತಿ ಮತ್ತು ಧಾರ್ಮಿಕ ಜೀವನ. ಎರಡನೆಯ ಸ್ತರವನ್ನು ಇದರ ಮುಂದುವರಿಕೆಯಾಗಿ ಗ್ರಹಿಸಬಹುದು. ಅದೇ ಆಧ್ಯಾತ್ಮಿಕ ಜೀವನ. ಅವರು ಪುರುಷರಾಗಿರಲಿ, ಸ್ತ್ರೀಯರಾಗಿರಲಿ, ಇದನ್ನು ಅನುಸರಿಸಲೇಬೇಕು. ಅದರಲ್ಲಿಯೂ ಮಹಿಳೆಯರಿಗೆ ವಿಶೇಷವಾಗಿ ಪ್ರೋತ್ಸಾಹ ಕೊಟ್ಟು, ಅವರನ್ನು ಆಧ್ಯಾತ್ಮಿಕ ಜೀವನದ ಕಡೆ ಸದ್ದುಗದ್ದಲವಿಲ್ಲದೆ ತೊಡಗಿಸಿದ ಹಿರಿಮೆ ಶ್ರೀಮಾತೆಯವರದು.

ಸೋದರಿ ನಿವೇದಿತಾರ ಹೆಣ್ಣು ಮಕ್ಕಳ ಏಳಿಗೆ ಕಾರ್ಯಕ್ರಮದಲ್ಲಿ ಶ್ರೀಮಾತೆಯವರಿಗೆ ಪೂರ್ಣ ನಂಬಿಕೆಯಿತ್ತು. ಅದರ ಬಗ್ಗೆ ಹೆಮ್ಮೆಯೂ ಇತ್ತೆನ್ನಬಹುದು. ಅವರು ಅದನ್ನು ಹೃತ್ಪೂರ್ವಕವಾಗಿ ಬೆಂಬಲಿಸಿದರು. ವಿದ್ಯಾಭ್ಯಾಸ ಕೊಡುವುದರಿಂದ ಮಹಿಳೆಯರು ಧೈರ್ಯ ಸ್ಥೈರ್ಯ ಆತ್ಮವಿಶ್ವಾಸ ಹೊಂದುತ್ತಾರೆಂಬುದು ಅವರಿಗೆ ಮನವರಿಕೆಯಾಗಿತ್ತು.

ಸ್ತ್ರೀಯರು ಬ್ರಹ್ಮಚಾರಿಣಿಯರಾಗಿ ಉಳಿಯಲು ಇಷ್ಟಪಟ್ಟರೆ ಅದನ್ನು ಪ್ರೋತ್ಸಾಹಿಸಬೇಕು ಎಂಬುದು ಶ್ರೀಮಾತೆಯವರ ಇಚ್ಛೆಯಾಗಿತ್ತು. ಒಮ್ಮೆ ಒಬ್ಬ ತಾಯಿ ತನ್ನ ಮಗಳಿಗೆ ಮದುವೆಯಾಗುವಂತೆ ಬುದ್ಧಿ ಹೇಳಿ ಎಂದು ಆಗ್ರಹ ಪಡಿಸಿದಾಗ ಅವರು ಈ ರೀತಿ ನುಡಿದರು: "ಜೀವನದುದ್ದಕ್ಕೂ ಇನ್ನೊಬ್ಬನ ಗುಲಾಮಳಾಗಿದ್ದುಕೊಂಡು ಆತನ ಕಾಮವನ್ನು ಪೂರೈಸಲು ಹೆಣಗುವುದು ಅಂದರೆ ಅದೇನು ಸಾಮಾನ್ಯವೇ? ಮದುವೆಯಾಗದೆ ಉಳಿಯುವುದರಲ್ಲಿ ಸ್ವಲ್ಪ ಅಪಾಯವಿದೆ ನಿಜ. ಆದರೆ ಮದುವೆ ಇಷ್ಟವಿಲ್ಲದಿದ್ದರೆ ಅದನ್ನು ಬಲವಂತವಾಗಿ ಕುತ್ತಿಗೆಗೆ ಕಟ್ಟಿ ಕೊನೆಯತನಕ ಪ್ರಾಪಂಚಿಕ ಜೀವನಕ್ಕೆ ನೂಕಕೂಡದು. ಯಾವ ಹೆಣ್ಣು ಮಕ್ಕಳಿಗೆ ತ್ಯಾಗದ ಕಡೆಗೆ ಮನಸ್ಸಿದೆಯೋ ಅಂಥವರನ್ನು ಬ್ರಹ್ಮಚಾರಿಣಿಯರಾಗಿ ಉಳಿಯಲು ಪ್ರೋತ್ಸಾಹಿಸಬೇಕು." (ವಾತ್ಸಲ್ಯ ತೀರ್ಥ, ಪು. ೬೬)

ಹೀಗೆ ಶ್ರೀಮಾತೆಯವರ ಸಾಮಾಜಿಕ ಪರಿವರ್ತನ ವಿಚಾರಧಾರೆಯು ಅವರು ಹಳೆಯ ಕಾಲದವರಾದರೂ ಬಹಳ ಆಧುನಿಕ ವಿಚಾರಗಳನ್ನೊಳಗೊಂಡು ಹರಿಯುತ್ತದೆ. ಅದರಲ್ಲಿ ತಾಯಿಯ ಅಧಿಕಾರವಾಣಿ, ಮಮತೆ, ಜಾಣ್ಮೆಯು ತುಂಬಿದೆ. ಶ್ರೀರಾಮಕೃಷ್ಣರ ಮೌನವಾಣಿಯಾಗಿ, ಸ್ವಾಮಿ ವಿವೇಕಾನಂದರ ಮಹತ್ಕಾರ್ಯಕ್ಕೆ ಆಸರೆಯಾಗಿ ಶ್ರೀಮಾತೆ ಎಲ್ಲರ ಹೃದಯಗಳಲ್ಲಿ ಕಂಗೊಳಿಸಿದ್ದಾರೆ.

**ಪ್ರಸೀದ ಮಾತರ್ವಿನಯೇನ ಯಾಚೇ**
**ನಿತ್ಯಂ ಭವ ಸ್ನೇಹವತೀ ಸುತೇಷು ।**
**ಪ್ರೇಮೈಕಬಿಂದುಂ ಚಿರದಗ್ಧಚಿತ್ತೇ**
**ವಿಷಿಂಚ ಚಿತ್ತಂ ಕುರು ನಃ ಸುಶಾಂತಮ್ ॥**

"ಮಕ್ಕಳಾದ ನಮ್ಮಲ್ಲಿ ಪ್ರಸನ್ನೆಯಾಗಿ, ಸದಾ ಪ್ರೀತಿ ತೋರೆಂದು ಬೇಡಿಕೊಳ್ಳುತ್ತೇವೆ. ಬೆಂದು ಬಳಲಿದ ನಮ್ಮ ಹೃದಯಕ್ಕೆ ನಿನ್ನ ಪ್ರೇಮದ ಬಿಂದುವೊಂದನ್ನು ಮಾತ್ರ ಚಿಮುಕಿಸಿ ಶಾಂತಿಯನ್ನು ನೀಡು!" ❖

## ಸಾಮಾಜಿಕ ಪ್ರಜ್ಞೆ

ಸ್ವಾಮಿ ಜ್ಞಾನಾನಂದರು ಜಯರಾಂಬಾಟಿಯಲ್ಲಿದ್ದಾಗ ಹೇಗಾದರೂ ಮಾಡಿ ಶುದ್ಧ ಹಾಲನ್ನು ಕೊಂಡುಕೊಳ್ಳಬೇಕೆಂದು ಬಯಸಿದರು. "ಎಂಟು ಸೇರಿಗೆ ಒಂದು ರೂಪಾಯಿ ತೆಗೆದುಕೊಂಡರೂ ಅಡ್ಡಿಯಿಲ್ಲ. ನಮಗೆ ಅಪ್ಪಟ ಹಾಲನ್ನು ಕೊಡು" ಎಂದು ಹಾಲಿನವನಿಗೆ ಹೇಳಿದರು. ಶ್ರೀಮಾತೆಯವರು ಇದನ್ನು ಕೇಳಿಸಿಕೊಂಡು ಹೇಳಿದರು: "ಇದೇನು ಜ್ಞಾನ್? ಇಲ್ಲಿ ಪೈಸಾಕ್ಕೆ ಒಂದು ಪಾವು ಹಾಲು. ಬಡವರಿಗೂ ನಿಲುಕುವಂತಹುದು. ಮತ್ತೆ ನೀನು ಈ ರೀತಿ ದರ ಹೆಚ್ಚಿಸಿದರೆ ಹೇಗೆ? ನೀರು ಬೆರೆಸುವುದು ಹಾಲಿನವನ ಸ್ವಭಾವ. ದರ ಜಾಸ್ತಿ ಮಾಡಿದರೆ ದುಡ್ಡಿನ ಆಸೆಯಿಂದ ಇನ್ನೂ ಜಾಸ್ತಿ ನೀರು ಬೆರೆಸುತ್ತಾನೆ."